ಆ) ಹಾಗಿದ್ದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಈ ಪ್ರದೇಶದ ಸುಧಾರಣೆಗಾಗಿ ಈ ವರ್ಷದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):- ಹೌದು, ಬಾದಾಮಿ ಪಟ್ಟಣದಲ್ಲಿ 10 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ. ಈ ಕೊಳಚೆ ಪ್ರದೇಶಗಳನ್ನು ಕರ್ನಾಟಕ ಕೊಳಚೆ ಪ್ರದೇಶದ ಅಭಿವೃದ್ಧಿ ಮತ್ತು ಕೊಳಚೆ ನಿರ್ಮೂಲನೆ ಕಾಯಿದೆಯನ್ವಯ ಘೋಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಘೋಷಣೆ ನಂತರ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- ಬಾದಾಮಿ ತಾಲ್ಲೂಕಿನಲ್ಲಿರುವ ಸವಳು-ಜವಳು ಭೂಮಿಯ ವಿಸ್ತೀರ್ಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 6(10)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬಾದಾಮಿ ತಾಲ್ಲೂಕಿನಲ್ಲಿರುವ ಒಟ್ಟು ಸವಳು ಜೌಗು ಭೂಮಿಯ ವಿಸ್ತೀರ್ಣವೆಷ್ಟು? ಹಾಗೂ ಎಷ್ಟು ವರ್ಷಗಳಿಂದ ಎಷ್ಟು ಗ್ರಾಮಗಳಿಗೆ ವಿಸ್ತರಿಸಿದೆ (ಪ್ರತಿ ಗ್ರಾಮಗಳ ವಿವರ ನೀಡುವುದು)

2. ಸವಳು-ಜವಳು ಜಮೀನು ಸುಧಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):- ಬಾದಾಮಿ ತಾಲ್ಲೂಕಿನಲ್ಲಿ 1588 ಹೆಕ್ಟೆರ್ ಪ್ರದೇಶವು ಸವಳು ಮತ್ತು ಜವಳಿನಿಂದ ಹಾನಿಗೊಳಗಾಗಿರುತ್ತದೆ, ಗ್ರಾಮವಾರು ಆಂಕಿ-ಅಂಶವನ್ನು ಲಗತ್ತಿಸಿದೆ.

ಜೌಳು ಮತ್ತು ಜೌಗು ಜಮೀನುಗಳಲ್ಲಿ ಬಿಸಿಗಾಲುವೆಗಳನ್ನು ನಿರ್ಮಿಸಿ ಮಣ್ಣಿನಲ್ಲಿ ಶೇಖರವಾಗಿರುವ ಲವಣಾಂಶಗಳನ್ನು ಹೊರಹಾಕಿ ಭೂಮಿಯನ್ನು ಅಭಿವೃದ್ಧಿ ಪಡಿಸಲು ತಾಂತ್ರಿಕತೆ ಲಭ್ಯವಿದೆ. ಈ ಬಗ್ಗೆ ಕೃಷಿ ಇಲಾಖೆಯು ರೈತರಿಗೆ ತಾಂತ್ರಿಕ ಸಲಹೆಗಳನ್ನು ಈ ಭೂಮಿ ಅಭಿವೃದ್ಧಿಗೆ ನೀಡುತ್ತದೆ.

ಚುಕ್ಕೆ ಗುರುತಿನಲ್ಲದ ಪ್ರಶ್ನೆ ಸಂಖ್ಯೆ: 7(112)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುವಿಟಕಲ್):- ಭಾರಿ ಮಳೆಯಿಂದಾದ ಹಾನಿಯ ಬಗ್ಗೆ, ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜೂನ್ 16, 17, 18-1996ರ ರಂದು ಬಿದ್ದಂತಹ ಭಾರಿ ಮಳೆಯಿಂದ ಆದ ಹಾನಿಯೆಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಈ ಹಾನಿಯಿಂದ ಜನ-ಜಾನುವಾರು ಬೆಳೆ ಹಾಗೂ ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಆಗಿರುವಂತಹ ನಷ್ಟ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಇ) ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಿರುವ ಹಣ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಈ) ಈ ಬಾಬ್ತಿಗಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು? ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಶ್ರೀ ರಮೇಶ್.ಸಿ.ಜಿಗಜಿಣಗಿ (ಕಂದಾಯ ಸಚಿವರು):- ಜೂನ್ ತಿಂಗಳಿನ ಮಳೆಯಿಂದಾದ ಒಟ್ಟು ಹಾನಿ ರೂ. 125 1.72 ಲಕ್ಷಗಳು (ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.